ಖಾಲಿ ಉಳಿದಿದ್ದರಿಂದ ಮಕ್ಕಳ ಕಲಿಯುವಿಕೆ ಹಾಗೂ ಅವರ ಪ್ರಗತಿ ಕುಂಠಿತವಾಗಲಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಅಧ್ಯಾಪಕರ ಕೊರತೆ ಇದ್ದಾಗ ಖಂಡಿತವಾಗಿಯೂ ಶಿಕ್ಷಣದ ಮಟ್ಟ ಕುಸಿತವಾಗುತ್ತದೆ ಹಾಗೂ ತೊಂದರೆಯಾಗುತ್ತದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೂಡಾ ಅದರಿಂದ ಸಾಕಷ್ಟು ಅನಾನುಕೂಲವಾಗುತ್ತದೆ. ಅದಕ್ಕಾಗಿ ಈಗ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ಯಾವುದೇ ರೀತಿಯಾದ ಆರ್ಥಿಕ ಮಿತವ್ಯಯವನ್ನು ನಾವು ಅನ್ವಯ ಮಾಡಬಾರದು ಎಂದು ಹೇಳಿ ಅದನ್ನು ನಾವು ತೆಗೆದುಹಾಕಿದ್ದೇವೆ. ಅದಕ್ಕನುಗುಣವಾಗಿ ಒಂದು ಹಂತದ ಶಿಕ್ಷಕರ ನೇಮಕಾತಿಯನ್ನು ಕೂಡ ನಾವು ನಾಲ್ಕು ತಿಂಗಳ ಹಿಂದೆ ಮಾಡಿದ್ದೇವೆ. ಇನ್ನು ಎರಡನೇ ಮಟ್ಟದಲ್ಲಿ ಯಾವ ಹುದ್ದೆಗಳು ಇದೆ. ಅವುಗಳನ್ನು ಭರ್ತಿ ಮಾಡತಕ್ಕಂಥ ಕಾರ್ಯಕ್ರಮವನ್ನು ಕೂಡಾ ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ನಿಯಮಾವಳಿ ಕೂಡಾ ಸಿದ್ಧವಾಗಿದೆ. ಕ್ಯಾಬಿನೆಟ್ ಅದನ್ನು ಅನುಮೋದನೆ ಮಾಡಿದಮೇಲೆ ರಾಜ್ಯಪಾಲರು ಕೂಡಾ ಅಂಕಿತವನ್ನು ನಿಯಮಾವಳಿಗೆ ಕೊಟ್ಟಿದ್ದಾರೆ. ನಾವು ನಿಯಮಾವಳಿ ಕೊಟ್ಟಂಥ ಒಂದು ತಿಂಗಳವರೆಗೆ ಅವರಿಗೆ ಅರ್ಜಿಗಳನ್ನು ಆಯಾ ಎಂಪ್ಲಾಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಕೊಡುವುದಕ್ಕೆ ಅನುವು ಮಾಡಿಕೊಡಬೇಕಾಗುತ್ತದೆ. ಆ ಅರ್ಜಿಗಳು ಬಂದಮೇಲೆ ಇನ್ನು ಆರು ತಿಂಗಳ ಒಳಗಡೆ ನಾವು ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿ ಕಂಪ್ಲೀಟ್ ಆಗಿ ಯಾವುದು ಹುದ್ದೆಗಳು ಖಾಲಿಯಿವೆ ಅವುಗಳನ್ನು ಭರ್ತಿ ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಬಹುಶ: ಇನ್ನು ಮುಂದೆ ಬರತಕ್ಕಂಥ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಈ ಖಾಲಿ ಬಿದ್ದಂಥ ಹುದ್ದೆಗಳನ್ನು ತುಂಬಿಸುವುದಕ್ಕೆ ನಾವೆಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ.

ವಿಷಯ:ಬೆಂಗಳೂರು ನಗರದಲ್ಲಿ ಸಂಚಾರಿ ಸಂಚಾರ ನ್ಯಾಯಾಲಯದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 428 (2119)

ಶ್ರೀ ಪೆರಿಕಲ್.ಎಂ.ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ಬೆಂಗಳೂರು ನಗರದಲ್ಲಿ ಸಂಚಾರಿ ಸಂಚಾರ ನ್ಯಾಯಾಲಯವು ಕಾರ್ಯ ನಿರ್ವಹಿಸುತ್ತಿದೆಯೆ?

ಆ ಹಾಗಿದ್ದಲ್ಲಿ ಮೇಲ್ಕಂಡ ನ್ಯಾಯಾಲಯವು ಪ್ರತಿದಿನ ಯಾವ ಸ್ಥಳಗಳಲ್ಲಿ ಭೇಟಿ ಮಾಡುತ್ತಿವೆ.

ಇ 1991ನೇ ಸಾಲಿನಲ್ಲಿ ಸಂಗ್ರಹಿಸಿದ ಜುಲ್ಮಾನೆ ಹಣವೆಷ್ಟು (ಜನವರಿ 91 ರಿಂದ ಡಿಸೆಂಬರ್ 91ರ ಅಂತ್ಯದವರೆಗೆ ?

ಈ ಹಾಗಿಲ್ಲದೆ ಇದ್ದಲ್ಲಿ, ಸರ್ಕಾರವು ಬೆಂಗಳೂರು ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಂಚಾರಿ ಸಂಚಾರ ನ್ಯಾಯಾಲಯ ಸ್ಥಾಪಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ಬ್ಲೇಸಿಯಸ್.ಎಂ.ಡಿಸೋಜ (ಕಾನೂನು ಸಚಿವರು)-

ಅ ಇಲ್ಲ.

ಆ 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ 'ಆ'ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಸಂಚಾರಿ ಸಂಚಾರ ನ್ಯಾಯಾಲಯವನ್ನು ಬೆಂಗಳೂರು ನಗರದಲ್ಲಿ 1971 ರಲ್ಲಿಯೇ ಸ್ಥಾಪಿಸಲಾಗಿತ್ತು. ಆದರೆ ಮೋಟಾರು ವಾಹನ ಕಾಯಿದೆಯಲ್ಲಿನ ಲೋಪದೋಷಗಳಿಂದ ಇದು ಪುನ: ಕಾರ್ಯಾರಂಭ ಮಾಡಲಾಗಿಲ್ಲ. ಕಾರ್ಯಾರಂಭ ಮಾಡುವ ಬಗ್ಗೆ ಪುನರ್ ಪರಿಶೀಲಿಸಲಾಗುವುದು.

ಶ್ರೀ ಪೆರಿಕಲ್. ಎಂ. ಮಲ್ಲಪ್ಪ:- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಮೊಬೈಲ್ ಟ್ರಾಫಿಕ್

ಬೋರ್ಡ್ಸ್ ಫಂಕ್ಷನಿಂಗ್ ಆಗುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ "ಇಲ್ಲ" ಎಂದು ಹೇಳಿದ್ದಾರೆ. ಈಗ ಯಾರಿಗಾದರೂ ಫೈನನ್ನು ಹಾಕಿದರೆ ಅವರು ರೆಗ್ಯುಲರ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿ ಅಲ್ಲಿ ಎರಡು-ಮೂರು ದಿವಸ ಸಮಯವನ್ನು ಕಳೆಯಬೇಕಾಗುತ್ತದೆ. ಅಷ್ಟು ಸಮಯವನ್ನು ಕಳೆದು ಅವರು ಫೈನನ್ನು ಕಟ್ಟಿ ಬರಬೇಕಾದರೆ ಸುಮಾರು ನಾಲ್ಕೈದು ದಿವಸಗಳು ಆಗುತ್ತದೆ. ಆದರೆ ಮೊಬೈಲ್ ಕೋರ್ಟ್ಸ್‌ಗಳು ಎನ್ನುವುದು ಬಹಳ ಜನಗಳಿಗೆ ಕನ್‌ವೀನಿಯೆಂಟ್ ಆಗಿತ್ತು. ಅದನ್ನು ಯಾವ ರೀಸನ್‌ಗೆ ಡಿಸ್‌ಕಂಟಿನ್ಯೂ ಮಾಡಿದ್ದಾರೋ ಗೊತ್ತಿಲ್ಲ. ಆದರೆ ಈ ಟ್ರಾಫಿಕ್ ಫೈನನ್ನು ವಸೂಲು ಮಾಡುವುದಕ್ಕೆ ಬಾಂಬೆಯಲ್ಲಾಗಲಿ, ದೆಹಲಿಯಲ್ಲಾಗಲೀ ಪ್ರತಿಯೊಂದು ಸರ್ಕಲ್‌ಗಳಲ್ಲೂ, ಒಂದು ಬೋರ್ಡ್‌ನ್ನು ಹಾಕಿರುತ್ತಾರೆ. ಎಲ್ಲೊ ಲೈನನ್ನು ದಾಟಿದರೆ 50 ರೂಪಾಯಿ ಫೈನ್, ಇಲ್ಲ, ರೆಡ್ ಲೈನ್ ಜಂಪ್ ಮಾಡಿದರೆ ನೂರು ರೂಪಾಯಿ ಫೈನ್, ಓವರ್ ಸ್ಪೀಡ್ ಹೋದರೆ 200 ರೂಪಾಯಿಗಳ ಫೈನ್ ಎಂದು ಹೇಳಿ ಹಾಕಿರುತ್ತಾರೆ. ಆ ರೀತಿಯಲ್ಲಿ ಏನಾದರೂ ನಮ್ಮ ಸರ್ಕಲ್‌ಗಳಲ್ಲೂ ಒಂದು ನಿಗದಿತವಾಗಿ ಫೈನ್ ಇಷ್ಟು ಎಂದು ಹೇಳಿದರೆ ಪಬ್ಲಿಕ್‌ಗೆ ಆಗುವ ಹೆರಾಸ್‌ಮೆಂಟ್ ಕಡಿಮೆ ಆಗುತ್ತದೆ. ಈಗ ಏನಾಗಿದೆ, ಮುಖ ನೋಡಿ ಫೈನನ್ನು ತೆಗೆದುಕೊಳ್ಳುತ್ತಾರೆ. 50ರೂಪಾಯಿ ದಂಡ ಇರುವ ಕಡೆ 500ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಐದುನೂರು ರೂಪಾಯಿ ಇರುವ ಕಡೆ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಟೇಬಲ್ ಕೆಳಗೆ ನೂರು ರೂಪಾಯಿಗಳನ್ನು ತೆಗೆದುಕೊಂಡು ಫೈನೇ ಇಲ್ಲ ಹೋಗು ಎಂದು ಹೇಳುತ್ತಾರೆ. ಈ ರೀತಿ ಪರಿಸ್ಥಿತಿಯಾಗಿದೆ. ಆದುದರಿಂದ ಕಾನೂನು ಮಂತ್ರಿಗಳು ಈ ಮೊಬೈಲ್ ಕೋರ್ಟ್ಸ್‌ನ್ನು ಮತ್ತೆ ಜಾರಿಗೆ ತಂದು ಜನಗಳಿಗೆ ಅನುಕೂಲವನ್ನು ಮಾಡಬೇಕು. ಈ ರೀತಿ ಎಲ್ಲಾ ಸರ್ಕಲ್‌ಗಳಲ್ಲೂ ಒಂದೊಂದು ಬೋರ್ಡನ್ನು ಹಾಕಿ, ಯಾವ ಯಾವ ಪ್ರಕಾರ ಟ್ರಾಫಿಕ್ ಅಫೆನ್ಸ್‌ಗೆ ಇಷ್ಟಿಷ್ಟು ಫೈನ್ ಹಾಕಬೇಕು ಎಂದು ಹೇಳಿ ನಿಗದಿ ಮಾಡಿದರೆ ಪಬ್ಲಿಕ್‌ಗೆ ಹೆರಾಸ್‌ಮೆಂಟ್ ಆಗುವುದಿಲ್ಲ, ಆಗ ಇಂಥ ತಪ್ಪನ್ನು ಮಾಡಿದರೆ ಇಷ್ಟು ದುಡ್ಡನ್ನು ಕಟ್ಟಬೇಕಾಗುತ್ತದೆ ಎಂದು ಹೇಳಿ ಗೊತ್ತಿರುತ್ತದೆ. ಅಲ್ಲಲ್ಲಿ ಮೊಬೈಲ್ ವ್ಯಾನ್‌ಗಳು ಇದ್ದರೆ ಈ ಟ್ರಾಫಿಕ್ ಫೈನ್‌ನಿಂದ ಈ ಬೆಂಗಳೂರು ಮಹಾನಗರದಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳು ಫೈನ್ ತಮಗೆ ವಸೂಲಾಗುತ್ತದೆ.

ಶ್ರಿ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಯಾವರೀತಿಯಲ್ಲಿ ಈ ಮೊಬೈಲ್ ಟ್ರಾಫಿಕ್ ಕೋರ್ಟ್ ಸ್ಥಾಪನೆಯಾಗಬೇಕೆಂದು ವಿವರಿಸಿದೆನೆ ಹೊರತು ನಾನು ಈ ವಿಷಯವನ್ನು ಪರಿಶೀಲನೆ ಮಾಡುವುದಿಲ್ಲ ಎಂದು ಹೇಳಲಿಲ್ಲ. ಮಾನ್ಯ ಪೆರಿಕಲ್ ಮಲ್ಲಪ್ಪನವರ ಸಲಹೆ ಒಳ್ಳೆಯದಾಗಿದೆ. ನಾನು ಕೂಡಲೇ ಯಾವರೀತಿಯಲ್ಲಿ ಇದನ್ನು ಸ್ಥಾಪನೆ ಮಾಡ ಬಹುದೆಂದು ವಿಚಾರಿಸಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಛೇರ್ಮನ್:- ಮುಂದಿನ ಶ್ರಿ ರಾಮಲಿಂಗರೆಡ್ಡಿಯವರ 906ನೇ ಪ್ರಶ್ನೆ ಡಿ.ಪಿ.ಎ.ಆರ್ ಗೆ ವರ್ಗಾವಣೆಯಾಗಿದೆ. ಅದಕ್ಕಾಗಿ ಇದನ್ನು ತಡೆಹಿಡಿಯಲಾಗಿದೆ. ಈ ರೀತಿಯಾಗಿ ಇಷ್ಟೊಂದು ಆದಾಯ ಬರುವ ಕಡೆ ತಾವು ಪಬ್ಲಿಕ್‌ಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರಿ ಬ್ಲೇಸಿಯಸ್ ಎಂ. ಡಿಸೋಜ:- 1971 ರಲ್ಲಿ ಟ್ರಾಫಿಕ್ ಮೊಬೈಲ್ ಕೋರ್ಟ್‌ಗಳು ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಅದರಲ್ಲಿ ಕಾನೂನಿನ ಅಡಚಣೆ ಇದ್ದ ಕಾರಣ 1978ರಲ್ಲಿ ಅದು ರದ್ದಾಯಿತು. ಅದರ ನಂತರ ಇಷ್ಟರವರೆಗೆ ಇದರ ಅವಶ್ಯಕತೆ ಇದೆ ಎಂದು ನಮ್ಮ ಪೋಲಿಸ್ ಡಿಪಾರ್ಟ್‌ಮೆಂಟ್‌ನಿಂದ ಆಗಲಿ, ಹಾಗೂ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನಿಂದ ಆಗಲಿ ನಮ್ಮ ಲಾ ಡಿಪಾರ್ಟ್‌ಮೆಂಟ್‌ಗೆ ಬೇಡಿಕೆ ಬರಲಿಲ್ಲ. ಮಾನ್ಯ ಪೆರಿಕಲ್ ಮಲ್ಲಪ್ಪನವರ ಸಲಹೆ ಬಹಳ ಸೂಕ್ತವಾಗಿದೆ. ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ಈ ಬಗ್ಗೆ ನಮ್ಮ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರಾಗಲೀ ಅಥವಾ ಹೋಂ ಡಿಪಾರ್ಟ್‌ಮೆಂಟ್‌ನವರಾಗಲೀ, ನಮ್ಮ ಪರಿಶೀಲನೆಗೆ ಕಳುಹಿಸಿದರೆ ನಾವು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರಿ ಪೆರಿಕಲ್. ಎಂ. ಮಲ್ಲಪ್ಪ: ತಾವು ಕಾನೂನು ಮಂತ್ರಿಗಳಾಗಿರುವುದರಿಂದ ತಾವು ಜನರಿಗೆ ಏನು

ಸಹಾಯ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಈಗ ನಾನು ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರಾಗಲೀ, ಹೋಂ ಡಿಪಾರ್ಟ್‌ಮೆಂಟ್‌ನವರಾಗಲಿ ಅವರು ಜನಗಳಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಬೇಕು. ಟ್ರಾಫಿಕ್ ಮೊಬೈಲ್ ಕೋರ್ಟ್ಸ್ ಮುಂದೆ ಬೆಂಗಳೂರಿನಲ್ಲಿತ್ತು. ಇದನ್ನು ತೆಗೆಯಲು ಯಾವ ಕಾನೂನಿನ ಅಡಚಣೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ ಅಲ್ಲಿ ಒಬ್ಬರು ಮ್ಯಾಜಿಸ್ಟ್ರೇಟ್ ಮತ್ತು ಒಬ್ಬರು ಪೋಲೀಸ್ ಇನ್‌ಸ್ಪೆಕ್ಟರ್ ಇರುವರು, ಇಲ್ಲವೇ ಸಬ್‌ಇನ್ಸ್‌ಪೆಕ್ಟರ್ ಇರುವರು. ಅವರು ಫೈನ್ ಕಲೆಕ್ಟ್ ಮಾಡುತ್ತಿದ್ದರು. ಅದು ಸ್ಮೂತ್ ಆಗಿ ನಡೆಯುತ್ತಿತ್ತು. ಇದರೊಳಗೆ ಕಾನೂನಿನ ಅಡಚಣೆ ಏನೂ ಇಲ್ಲ ಅಂತ ಕಾಣುತ್ತದೆ. ಅದೇ ಮ್ಯಾಜಿಸ್ಟ್ರೇಟ್ ಅವರು ಈಗ ಒಂದು ಬಿಲ್ಡಿಂಗ್‌ನಲ್ಲಿ ಕುಳಿತುಕೊಂಡು ದಂಡ ವಸೂಲಿ ಮಾಡುತ್ತಿದ್ದಾರೆ. ಮೊಬೈಲ್ ವ್ಯಾನಿನಲ್ಲಿ ಕುಳಿತುಕೊಂಡು ವಸೂಲು ಮಾಡಲು ಕಾನೂನಿನ ಅಡಚಣೆ ಬರುವುದೆಂದು ನನಗಂತೂ ತೋಚಲಿಲ್ಲ. ತಾವು ಇದನ್ನು ಸ್ವಲ್ಪ ತಮ್ಮ ಡಿಪಾರ್ಟ್‌ಮೆಂಟ್‌ನಿಂದ ಮೂವ್ ಮಾಡಿ, ಹೋಂ ಡಿಪಾರ್ಟ್‌ಮೆಂಟ್ ಆಗಲಿ, ಅಥವಾ ಬೇರೆ ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಾಗಲಿ, ಅವರನ್ನು ಕೇಳಿಬಿಟ್ಟು ಮೊಬೈಲ್ ಕೋರ್ಟ್ಸ್ ಅನ್ನು ಮತ್ತೆ ಜಾರಿಗೆ ತರಬೇಕು ಮತ್ತು ಎಲ್ಲಾ ಸರ್ಕಲ್‌ಗಳಲ್ಲಿಯೂ ಯಾವ್ಯಾವ ಅಫೆನ್ಸ್‌ಗೆ ಎಷ್ಟೆಷ್ಟು ಫೈನ್ ಅಂತ ತಾವು ಬೋರ್ಡ್‌ಗಳನ್ನು ಹಾಕಿಸುವುದಕ್ಕೆ ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ವಿಷಯ:- ಆಂಗ್ಲ ಮಾಧ್ಯಮ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 430 (2310)

ಶ್ರೀ ಟಿ.ಜಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಡಿ. ಕೆ. ನಾರಾಯಣ ಭಟ್ಟ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಹೆಸರಿನಲ್ಲಿ ಖೋಟಾ ಮೊಹರುಗಳನ್ನು ಸೃಷ್ಟಿಸಿ ರಾಜ್ಯದಲ್ಲಿ ನೂರಾರು ಆಂಗ್ಲ ಪಾಠಶಾಲೆಗಳನ್ನು ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಸದರಿ ಅವರ ಖೋಟಾ ಹೆಸರಿನ ಅನೇಕ ಮಾಹಿತಿಗಳನ್ನು ಹೊರಡಿಸಲು ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಈ ಖೋಟಾ ದಾಖಲೆಗಳನ್ನು ಸೃಷ್ಟಿಸುವ ಒಂದು ಜಾಲವೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ ಈ ಖೋಟಾ ದಾಖಲೆಯಿಂದ ಅನೇಕ ಆಂಗ್ಲ ಶಾಲೆಗಳಿಗೆ ಅನುಮತಿ ನೀಡಿ ನಡೆಸುತ್ತಿರುವುದು ತಿಳಿದಿದೆಯೇ? ಹಾಗಿದ್ದಲ್ಲಿ ಈ ಶಾಲೆಗಳಾವುವು ? ಶಾಲೆಗಳ ವಿವರ ಮತ್ತು ಸ್ಥಳದ ವಿವರ ಒದಗಿಸುವುದು.

ಉ ಈ ಖೋಟಾ ಜಾಲಕ್ಕೆ ಶಾಮೀಲಾದ ಅಧಿಕಾರಿಗಳು ಯಾರು ಯಾರು, ಅವರುಗಳ ಮೇಲೆ ಕೈಗೊಂಡ ಶಿಸ್ತಿನ ಕ್ರಮವೇನು? ಹೆಸರು, ಹುದ್ದೆ. ಇಲಾಖೆಯ ಪ್ರತ್ಯೇಕ ವಿವರ ನೀಡುವುದು ?

ಊ ಈ ಖೋಟಾ ಸಹಿಯಿಂದ ಅನುಮತಿ ಪಡೆದಿರುವ ಆಂಗ್ಲ ಶಾಲೆಗಳ ಪರವಾನಿಗೆಯನ್ನು ರದ್ದುಪಡಿಸದಿರಲು ಕಾರಣವೇನು ? ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ?

ಶ್ರೀ ಎಂ.ವೀರಪ್ಪಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)-

ಅ ಬಂದಿದೆ.

ಆ ಇಲ್ಲ.

ಇ ಇಲ್ಲ.